ನಿಧಿಯ ಮೂಲಕ ಇವರಿಗೆ ಹಳದಿ ಕಾರ್ಡ್‌ಗಳನ್ನು ಕೊಟ್ಟು ಆ ಚಿಕಿತ್ಸೆಯ ಭಾರವನ್ನು ಸರ್ಕಾರವೇ ತೆಗೆದುಕೊಳ್ಳಬೇಕೆಂಬ ಯೋಚನೆಯನ್ನು ಮಾಡುತ್ತಿದೆ, ಅದನ್ನು ನಾವು ಖಂಡಿತವಾಗಿ ನಿಮ್ಮ ಸಲಹೆಯ ಆಧಾರದ ಮೇಲೆ, ಆ ಯೋಜನೆಯನ್ನು ರೂಪಿಸುತ್ತೇವೆ.

(ಉ) ವಿಷಯ : ಜುರಾಲದಲ್ಲಿ ಹಳ್ಳಿಗಳು ಮುಳುಗಡೆಯಾಗಿರುವ ಬಗ್ಗೆ

ಶ್ರೀ ಎ. ಪಾಪರೆಡ್ಡಿ (ರಾಯಚೂರು) : ಮಾನ್ಯ ಅಧ್ಯಕ್ಷರೇ, ಜುರಾಲದಲ್ಲಿ 5 ಹಳ್ಳಿಗಳು ಮುಳುಗಡೆಯಾಗಿವೆ, ಎರಡು ದೇವಸ್ಥಾನಗಳು ಮುಳುಗಡೆಯಾಗಿವೆ, ನಾರದಗಟ್ಟ ದತ್ತಾತ್ರೇಯಾ ದೇವಸ್ಥಾನಗಳು ಮುಳುಗಡೆಯಾಗಿವೆ, ಇಲ್ಲಿಯವರೆಗೆ ಈ 5 ಹಳ್ಳಿಗಳಿಗೂ ಪುನರ್ವಸತಿಯನ್ನು ಕಲ್ಪಿಸಿಲ್ಲ, ಮತ್ತೆ ಜಿಲ್ಲಾಧಿಕಾರಿಗಳು ಪುನರ್ವಸತಿಗೆ ಬೇಕಾದಂತಹ ಎಲ್ಲಾ ಮಾಹಿತಿಯನ್ನು ಇಲ್ಲಿಗೆ ಕಳುಹಿಸಿಕೊಟ್ಟಿದ್ದಾರೆ, ಇದರ ಬಗ್ಗೆ ಇದುವರೆಗೂ ಏನು ಕ್ರಮವನ್ನು ತೆಗೆದುಕೊಂಡಿಲ್ಲ, ಇಲ್ಲಿ ದೇವಸ್ಥಾನಗಳಿಗೆ ಹೋಗುವುದಕ್ಕೆ ದಾರಿ ಇಲ್ಲ, ಲಕ್ಷಾಂತರ ಭಕ್ತಾದಿಗಳು ಹೋಗುತ್ತಿದ್ದಾರೆ, ಅಲ್ಲಿ ದಾರಿ ಇಲ್ಲ, ಇದಕ್ಕೆ ಬ್ರಿಡ್ಜ್ ಕಟ್ಟಿಕೊಡುತ್ತೇವೆಂದು ಆಗ್ರಿಮೆಂಟ್ ಆಗಿದೆ, ಆಂಧ್ರ ಪ್ರದೇಶದ ಮತ್ತು ಕರ್ನಾಟಕ ಸರ್ಕಾರದಿಂದ ಇಲ್ಲಿಯವರೆಗೂ ಯಾವ ಕಾರ್ಯಕ್ರಮಗಳು ಆಗಲಿಲ್ಲ, ಆ ಕ್ಷೇತ್ರದಲ್ಲಿರುವಂತಹ ಜನರು ದೇವಸ್ಥಾನಗಳಿಗೆ ಹೋಗುವುದಕ್ಕೆ ತೊಂದರೆಯಾಗಿದೆ, ಆದುದರಿಂದ ಈ 5 ಹಳ್ಳಿಗಳ ಜನರಿಗೆ ಪುನರ್ವಸತಿಯನ್ನು ಕಲ್ಪಿಸಿಕೊಡಬೇಕೆಂದು, ನಾನು ತಮ್ಮ ಮುಖಾಂತರ ಮಾನ್ಯ ಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ಈಗಾಗಲೇ ಪುನರ್ವಸತಿಯ ವಿಚಾರದಲ್ಲಿ, ಜುರಾಲದಿಂದ ಬರುವಂಥಾದ್ದು ಗೋದಾವರಿ ಕಣಿವೆಗೆ ಸೇರಿರುವುದರಿಂದ ಅದರಲ್ಲಿ ಸ್ವಲ್ಪ ಭಿನ್ನಾಭಿಪ್ರಾಯವಿದೆ, ಹಿನ್ನೀರನ್ನು ಆಂಧ್ರಪ್ರದೇಶದವರು ಬಳಸುವಂಥಾದ್ದು ಅದು ಅವರ ಹಕ್ಕು, ವಿದ್ಯುಚ್ಛಕ್ತಿ ಉತ್ಪಾದನೆಯಲ್ಲಿ ನಮ್ಮ ಪಾಲು ಇದೆ ಇಲ್ಲಿ ಪುನರ್ವಸತಿಯನ್ನು ಮಾಡುವುದಕ್ಕೆ ಆಂಧ್ರ ಪ್ರದೇಶದವರು ದುಡ್ಡು ಕೊಡಬೇಕೆಂಬ ಮಾತು ಇದೆ, ದಿವಂಗತ ದೇವರಾಜ್ ಅರಸುರವರ ಕಾಲದಲ್ಲಿ ಈ ಒಪ್ಪಂದ ಆಗಿದೆ, ಇಲ್ಲಿ ಎರಡು ದೊಡ್ಡ ಸೇತುವೆಗಳನ್ನು ಕಟ್ಟಿಸಿಕೊಡಬೇಕೆಂದು ಇದೆ, ಆ ಕಾರಣಕ್ಕಾಗಿ ಈಗಾಗಲೇ ವಿಶೇಷವಾದಂತಹ ಕರ್ತವ್ಯಗಳನ್ನು ನಾವು ಅವರಿಗೆ ಇಟ್ಟುಕೊಂಡಿದ್ದೇವೆ, ಈಗ ತಾವು ಏನು ಹೇಳಿದ್ದೀರಿ, ಅದಕ್ಕೆ ನಾವು ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ ಯಾವ ರೀತಿಯಾಗಿ ಪುನರ್ವಸತಿ ಯೋಜನೆಯನ್ನು ರೂಪಿಸಿದ್ದೀರಿ, ಅದೇ ರೀತಿಯಲ್ಲಿ ಇಲ್ಲೂ ರೂಪಿಸುತ್ತೇವೆ, ಈಗ ತಾವು ಏನು ಆತಂಕಕ್ಕೆ ಒಳಪಟ್ಟಿದ್ದೀರಿ, ತಾವು ಇಷ್ಟು ದಿವಸ ಏನು ಕಷ್ಟಗಳನ್ನು ಅನುಭವಿಸಿದ್ದೀರಿ, ಅದು ಪರಿಹಾರವಾಗುತ್ತೆದೆಂಬ ಮಾತನ್ನು ಹೇಳಲಿಚ್ಛಿಸುತ್ತೇನೆ. ಈಗ ಅಲ್ಲಿರುವಂಥ ಆಂಧ್ರಪ್ರದೇಶದ ಸರ್ಕಾರದ ಜೊತೆಯಲ್ಲಿ ಇಲ್ಲಿ ಇರುವಂತಹ ಸಮ್ಮಿಶ್ರ ಸರ್ಕಾರದ ನಮ್ಮ ಮಾನ್ಯ ಮುಖ್ಯಮಂತ್ರಿಯವರು, ಮಾತನಾಡಿ , ಆ ಸೇತುವೆ ಕಟ್ಟುವ ವಿಚಾರ ಹಾಗೂ ಪುನರ್ವಸತಿಗೆ ಹಣವನ್ನು ಬಿಡುಗಡೆ ಮಾಡುವ ಬಗ್ಗೆ ನಾವು ಒತ್ತಾಯ ಮಾಡಿ, ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಸಿದ್ದುಸಾವದಿ : ಮಾನ್ಯ ಅಧ್ಯಕ್ಷರೇ, ಇಂದಿನ ಕಾರ್ಯಕಲಾಪಗಳ ಪಟ್ಟಿ ಯಲ್ಲಿರುವಂತಹ ಕೈಮಗ್ಗ ನೇಕಾರರ ವಿಷಯವಾಗಿ ನಿಯಮ 69ರ ಮೇಲೆ ಚರ್ಚೆಸಲು ತಾವು ಅವಕಾಶವನ್ನು ಕೊಟ್ಟಿದ್ದೀರಿ, ರಾಜ್ಯದಲ್ಲಿ 1975ರಲ್ಲಿ ಕೈಮಗ್ಗ ಕೈಗಾರಿಕೆಯನ್ನು ಅಭಿವೃದ್ಧಿ ಪಡಿಸಲು, ಅದನ್ನು ಘೋಷಿಸಲು, ಅದರಲ್ಲೂ ವಿಶೇಷವಾಗಿ ಕೈಮಗ್ಗ ನೇಕಾರರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಲು.....